ಸಾರ್ವಜನಿಕ ವಿತರಣಾ ವ್ಯವಸ್ಥೆ

೨೨೫. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ನ್ಯಾಯಬೆಲೆ ಅಂಗಡಿಗಳ ಮೂಲಕ ಪೂರೈಸಲಾಗುತ್ತಿರುವ ಅಗತ್ಯ ವಸ್ತುಗಳು ಯಾವುವು ?

ಆ) ಕೇರಳದಲ್ಲಿರುವಂತೆ ಸರ್ಕಾರವೇನಾದರೂ ಅಗತ್ಯ ವಸ್ತುಗಳಾದ ಸೋಪ್, ಬಟ್ಟೆ ಮತ್ತು ಪುಸ್ತಕಗಳು ಇತ್ಯಾದಿಗಳನ್ನು ಶಾಲಾ ಮಕ್ಕಳಿಗೆ ಪೂರೈಸಲು ಉದ್ದೇಶಿಸಿದೆಯೆ ?

ಶ್ರೀ ಬಸವರಾಜ ಪಾಟೀಲ್ ಅನ್ವರಿ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಮಂತ್ರಿಗಳು).—

ಅ) ಅಕ್ಕಿ, ಗೋಧಿ, ರಾಗಿ, ಜೋಳ, ಸಕ್ಕರೆ, ತಾಳಿಎಣ್ಣೆ, ಸೀಮೆಎಣ್ಣೆ, ಸೀರೆ, ಕುಪ್ಪಸ ಧೋತಿ ಅಂಗಿ ಬಟ್ಟೆಗಳು.

ಆ) ಸದ್ಯಕ್ಕೆ ಇಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಬೆಲೆ ಹತೋಟಿಯ ದೃಷ್ಟಿಯಿಂದ ಮತ್ತು ಕನ್ಸೂಮರ್ಸ್‌ಗೆ ಅನುಕೂಲವಾಗುವ ದೃಷ್ಟಿಯಿಂದ ಕೇರಳದಲ್ಲಿ ಸೋಪು ಕೊಕೋನೇಟ್ ಆಯಿಲ್ ಬ್ರಗ್ಗಿ ಸ್ಪೈಸನ್ ವಸ್ತುಗಳನ್ನು ಬೇಳೆ ಕಾಳುಗಳು ಇತ್ಯಾದಿ ೧೩ ಐಟಂಗಳನ್ನು ಸಪ್ಲೈ ಮಾಡುತ್ತಾರೆ. ತಾವು ಕೂಡ ನ್ಯಾಯಬೆಲೆ ಅಂಗಡಿಗಳಲ್ಲಿ ಈ ರೀತಿ ೧೩ ಐಟಂಗಳನ್ನು ಸಪ್ಲೈ ಮಾಡಲು ಏತಕ್ಕೆ ಪ್ರಯತ್ನ ಮಾಡಬಾರದು ಈ ರೀತಿ ಮಾಡಿದರೆ ಕನ್ಸೂಮರ್ಸ್‌ಗೆ, ಸಹಾಯ ಮಾಡಿದ ಹಾಗೆ ಆಗುತ್ತದೆ. ಹಾಗೂ ಬೆಲೆ ಹತೋಟಿಗೆ ಬರುತ್ತದೆ.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಈಗಾಗಲೇ ಅವರು ಹೇಳಿರತಕ್ಕ ಕೆಲವು ದಾಸ್ತಾನುಗಳನ್ನು ನಮ್ಮ ಸರ್ಕಾರದಲ್ಲಿ ಬೇರೆಬೇರೆ ಇಲಾಖೆಗಳಲ್ಲಿ ವಿತರಣೆ ಮಾಡಲಾಗಿದೆ. ಪಠ್ಯ ಪುಸ್ತಕಗಳನ್ನು ನಮ್ಮ ಶಿಕ್ಷಣ ಇಲಾಖೆಯವರು ವಿತರಣೆ ಮಾಡುತ್ತಿದ್ದಾರೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಎಲ್ಲವನ್ನು ಒಬ್ಬರೇ ವಿತರಣೆ ಮಾಡತಕ್ಕ ವ್ಯವಸ್ಥೆ ಮಾಡಿದರೆ ಇನ್ನೂ ಹೆಚ್ಚಿನ ಅನುಕೂಲವಾಗುವುದು. ಅವರ ಕಳಕಳಿಯನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಕೇರಳದಿಂದ ಸಂಪೂರ್ಣ ವರದಿಯನ್ನು ತರಿಸಿ ನಂತರ ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ನ್ಯಾಯಬೆಲೆ ಅಂಗಡಿಗಳಲ್ಲಿ ಅಕ್ಕಿ, ಗೋಧಿ, ರಾಗಿ, ಜೋಳ ಇತ್ಯಾದಿ ೯ ಐಟಂಗಳನ್ನು ಕೊಡುತ್ತಿದ್ದೀರಿ, ಇದರ ಜೊತೆಗೆ ಸೀರೆ ಧೋತಿ ಮುಂತಾದವುಗಳನ್ನು ಗ್ರೀನ್ ಕಾರ್ಡ್ ಮತ್ತು ಸ್ಯಾಪರನ್ ಕಾರ್ಡ್ ಮೂಲಕ ಕೊಡುತ್ತಿದ್ದೀರಿ. ಈಗ ಕೊಡುತ್ತಿರುವ ಐಟಂ ಅನ್ನು ಜಾಸ್ತಿ ಮಾಡುವುದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ? ಇದನ್ನು ಸೊಸೈಟಿಗಳಿಗೆ ಕೊಡುವುದನ್ನು ಬಿಟ್ಟು ಪ್ರೈವೇಟ್ ಇಂಡಿವಿಜಯಲ್‌ಗೆ ಕೊಡುತ್ತಿದ್ದೀರಿ. ಪ್ರತಿಯೊಂದು ಜಿಲ್ಲೆಯಲ್ಲೂ ವಿಪರೀತ ಖೋಟಾ ಕಾರ್ಡಾಗಳಿವೆ. ಬೆಳಗಾಂನಲ್ಲಿ ೧೭ ಸಾವಿರ ಕಾರ್ಡ್‌ಗಳಿವೆ ಎಂದು ನೀವು ಸ್ಟೇಟ್‌ಮೆಂಟ್ ಕೊಟ್ಟಿದ್ದೀರಿ, ಅದನ್ನು ತಪ್ಪಿಸುವುದಕೋಸ್ಕರ ನೀವು ಏತಕ್ಕೆ ಸೊಸೈಟಿಗಳಿಗೆ ಕೊಡುವ ಪದ್ಧತಿಯನ್ನು ಏತಕ್ಕೆ ಅನುಸರಿಸಬಾರದು.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಈಗಾಗಲೇ ಒಂದೆರಡು ಸಲ ಈ ಪ್ರಶ್ನೆ ಸದನದಲ್ಲಿ ಬಂದಿದೆ. ಈಗ ಕಟ್ಟುನಿಟ್ಟಾಗಿ ನಾವು ಹೊಸದಾಗಿ ಇಂಡಿವಿಜುಯಲ್ ಕೊಡುತ್ತಿಲ್ಲ. ಕಾರ್ಡುದಾರರ ಸಂಘಗಳು ಹಾಗೂ ಸಂಘ ಸಂಸ್ಥೆಗಳಿಗೆ ಮಾತ್ರ ಕೊಡುತ್ತಿದ್ದೇವೆ. ಮೊನ್ನೆಯು ಬೇರೆಯ ವರಿಗೆ ಕೊಟ್ಟಿದ್ದೆವು, ಯಾರು ಒಳ್ಳೆಯ ರೀತಿಯಲ್ಲಿ ನಡೆಸಿಕೊಂಡು ಹೋಗುತ್ತಿದ್ದಾರೆ, ಅವರನ್ನು ಮುಂದು ವರಿಸುತ್ತಿದ್ದೇವೆ. ಕೆಲವು ಪ್ರಶ್ನೆಗಳು ಈ ಪ್ರಶ್ನೆಗೆ ಸಂಬಂಧಪಡದೆ ಇರುವುದರಿಂದ ನಾನು ಡಿವಿಷ್ಯಾಂಡ್ ಮೇಲೆ ಉತ್ತರ ಕೊಡುವಾಗ ಸವಿಸ್ತಾರವಾಗಿ ತಿಳಿಸುತ್ತೇನೆ.